ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ

230(1618)

ಸದಸ್ಯರ ಹೆಸರು

ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ)

ಉತ್ತರಿಸುವ ಸಚಿವರು

ಶ್ರೀ ಆರ್.ಅಶೋಕ್

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇಲ್ಲದೆ ಸಾಗರದಿಂದ ಸುಮಾರು 75ಕಿ.ಮೀ ಇರುವ ಶಿವಮೊಗ್ಗಕ್ಕೆ ಬಂದು ರಕ್ತವನ್ನು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿದೆ.

ಆ) ಸಾಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ತೆರೆಯಲು ಸರ್ಕಾರಕ್ಕಿರುವ ತೊಂದರೆಯೇನು?

ಇ) ಹಾಗಿದ್ದಲ್ಲಿ ಬ್ಲಡ್ ಬ್ಯಾಂಕ್ ತೆರೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು; ಯಾವಾಗ ತೆರೆಯಲಾಗುವುದು?

ಈಗ ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪಿಸಲಾಗಿದೆ, ಅಗತ್ಯತೆಗೆ ತಕ್ಕಂತೆ ಮತ್ತು ಹಣದ ಲಭ್ಯತೆಯ ಮೇಲೆ ಹಂತ ಹಂತವಾಗಿ ತಾಲ್ಲೂಕು ಆಸ್ಪತ್ರೆಗಳಿಗೆ ಬ್ಲಡ್ ಬ್ಯಾಂಕ್ ತೆರೆಯಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಆಕುಕ 236 ಸಿಜಿಎಂ 2007

ಶ್ರೀ ಬಿ.ಕೆ.ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಸಾಗರ ಕ್ಷೇತ್ರದ ನಮ್ಮ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಒದಗಿಸಿ ಎಂದು ನಾನು ಅವರನ್ನು ಕೇಳಿಕೊಂಡಿದ್ದೇನೆ. ಸಾಗರದಿಂದ ಶಿವಮೊಗ್ಗಕ್ಕೆ ಹೋಗಬೇಕಾದರೆ 75 ಕಿ.ಮೀ. ಆಗುತ್ತದೆ, ಪಕ್ಕದಲ್ಲಿಯೇ ಸೊರಬ ತಾಲ್ಲೂಕು 20 ಕಿ.ಮೀ., ಹೊಸನಗರ ತಾಲ್ಲೂಕು 20 ಕಿ.ಮೀ. ಇದು ಸಾಗರ ಇವುಗಳಿಗೆ ಹೆಡ್ ಕ್ವಾರ್ಟರ್ಸ್ ಆಗಿರುವುದರಿಂದ ಇಲ್ಲಿ ಒಂದು ಬ್ಲಡ್ ಬ್ಯಾಂಕ್‌ನ್ನು ಮಾಡಿದರೆ ಬಹಳ ಉತ್ತಮ. ಇದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ ಎನ್ನುವ ಕಾರಣದಿಂದ ನಾನು ಆರೋಗ್ಯ ಸಚಿವರಲ್ಲಿ ಬ್ಲಡ್ ಬ್ಯಾಂಕ್ ಮಾಡುವಂತೆ ಕೇಳಿದ್ದೇನೆ. ಅವರು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು.

ಏಕೆಂದರೆ ಅಲ್ಲಿ ಮೂಲ ಸೌಲಭ್ಯಗಳಾದ ಡಾಕ್ಟರ್‌ನ್ನು ಕೊಟ್ಟಿದ್ದೀರಿ, ಟೆಲಿಮೆಡಿಸಿನ್ ಕೊಟ್ಟಿದ್ದೀರಿ. ಆ ಆಸ್ಪತ್ರೆ ತುಂಬಾ ಚೆನ್ನಾಗಿದೆ. ಆದುದರಿಂದ ಬ್ಲಡ್ ಬ್ಯಾಂಕ್‌ನ ಸೌಲಭ್ಯವನ್ನು ತಾವು ಒದಗಿಸಿಕೊಟ್ಟರೆ ಖಂಡಿತ ನಮ್ಮ ಕ್ಷೇತ್ರದ ಜನರಿಗೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಿವಮೊಗ್ಗ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇದೆ. ಆದರೆ ಬ್ಲಡ್ ಸ್ಟೋರೇಜ್‌ನ್ನು ಸಾಗರ ಆಸ್ಪತ್ರೆಯಲ್ಲಿ ನಾವು ಮಾಡಿದ್ದೇವೆ. ಆದರೂ ನಿಮ್ಮ ಕ್ಷೇತ್ರದಲ್ಲಿ ಬ್ಲಡ್ ಬ್ಯಾಂಕ್ ಮಾಡಬೇಕೆಂದು ಮನವಿಯನ್ನು ನಮ್ಮಲ್ಲಿ ಮಾಡಿಕೊಂಡಿದ್ದೀರಿ. ಅದನ್ನು ನಾವು ಆದ್ಯತೆ ಮೇಲೆ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಬ್ಲಡ್ ಬ್ಯಾಂಕ್‌ನ್ನು ಮಾಡಲಾಗಿದೆ. ಕೆಲವು ತಾಲ್ಲೂಕುಗಳ ಮಟ್ಟಕ್ಕೂ ಹೋಗಬೇಕೆನ್ನುವ ಉದ್ದೇಶ ನಮಗೂ ಇದೆ. ಇದಲ್ಲದೇ ನಮ್ಮ ಉದ್ದೇಶ ಇರತಕ್ಕಂಥಾದ್ದು ಹೆರಿಗೆ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಬಹಳ ಇರುವುದರಿಂದ ಎಲ್ಲೆಲ್ಲಿ ನಮ್ಮ ಪ್ರಾಥಮಿಕ ಆರೋಗ್ಯಗಳಿಗೆ ಮೇಲ್ಪಟ್ಟು, ಅಂದರೆ ಸಿ.ಹೆಚ್.ಸಿ. ಗಳು ಬರುತ್ತದೆ, ತಾಲ್ಲೂಕು ಆಸ್ಪತ್ರೆಗಳು ಬರುತ್ತವೆ, ಈಗಾಗಲೇ ಅಂಥ ತಾಲ್ಲೂಕು ಆಸ್ಪತ್ರೆಗಳಲ್ಲಿ ಬ್ಲಡ್ ಸ್ಟೋರೇಜ್‌ಗಳನ್ನು ನಾವು ಮಾಡಿದ್ದೇವೆ. ಇದನ್ನು ಸಿ.ಹೆಚ್.ಸಿ. ಗಳಿಗೂ ತೆಗೆದುಕೊಂಡು ಹೋಗಬೇಕು ಎನ್ನುವುದು ಇದೆ. ಇದನ್ನು ಸಿ.ಹೆಚ್.ಸಿ.ಗಳಲ್ಲೂ ಕೂಡ ಬ್ಲಡ್ ಸ್ಟೋರೇಜ್‌ಗಳನ್ನು ಮಾಡುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ.

ಇನ್ನು ತಾವೇನು ಕೇಳಿದ್ದೀರಿ ಅದರ ಅವಶ್ಯಕತೆ ಬಗ್ಗೆ ಪರಿಶೀಲನೆಯನ್ನು ಮಾಡಿ ಅಲ್ಲಿ ಬ್ಲಡ್ ಬ್ಯಾಂಕ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಕಿಮ್ಸ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 231(1617)
ಸದಸ್ಯರ ಹೆಸರು : ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)
ಉತ್ತರಿಸುವ ಸಚಿವರು : ಶ್ರೀ ಡಾ॥ವಿ.ಎಸ್.ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೋಗಿಗಳು ದಾಖಲಾಗುತ್ತಿರುವುದರಿಂದ ಈಗಿರುವ ಹಾಸಿಗೆಗಳೊಂದಿಗೆ ಇನ್ನೂ 300 ಹಾಸಿಗೆಗಳನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ;